**ಓ.ಎಸ್ಃ 68/2018** **ಪಿಡಬ್ಲೂ–1 ಕಮಲಾಕ್ಷಿ @ ಕಸ್ತೂರಿ**

ದಿನಾಂಕಃ 18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಕೆ ಬಿ ವಕೀಲರಿಂದಃ**

ನನ್ನ ಯಜಮಾನರು ದಾವಾ ಆಸ್ತಿ ಸಂಖ್ಯೆ 1 ರಲ್ಲಿ ಅಂಗಡಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸದರಿ ಅಂಗಡಿಯಲ್ಲಿ ನನ್ನ ಯಜಮಾನರು ಮೊಬೈಲ್, ಟಿ ವಿ ಮತ್ತು ಇತರೆ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1 ಚಾಮರಾಜನಗರದ ಪಚ್ಚಪ್ಪ ಸರ್ಕಲ್ ನಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1 ರಲ್ಲಿ ನನ್ನ ಯಜಮಾನರು ವ್ಯಾಪಾರ ಮಾಡುತ್ತಿದ್ದಾಗ ಚೆನ್ನಾಗಿ ವ್ಯಾಪಾರ ಆಗುತ್ತಿತ್ತು ಮತ್ತು ಇಡೀ ಕುಟುಂಬವನ್ನು ನನ್ನ ಯಜಮಾನರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1ಅನ್ನು ನನ್ನ ಯಜಮಾನರು ಖರೀದಿಸಿದ ಬಗ್ಗೆ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನನ್ನ ಯಜಮಾನರು ದಾವಾ ಆಸ್ತಿ ಸಂಖ್ಯೆ 1 ಅನ್ನು ತಮ್ಮ ಸ್ವಂತ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 28.03.2018 ರಂದು ನನ್ನ ಯಜಮಾನರು ದಾವಾ ಆಸ್ತಿ ಸಂಖ್ಯೆ 1 ಅನ್ನು ರಾಮಕೃಷ್ಣ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಜೀವನಾಂಶದ ಅರ್ಜಿ ಸಲ್ಲಿಸಿದ ನಂತರ ಸದರಿ ವಿಚಾರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸಂಖ್ಯೆ 1 ಅನ್ನು ಮಾರಾಟ ಮಾಡಿದ ನಂತರ ರಾಮಕೃಷ್ಣರವರೇ ಸ್ವಾಧೀನದಲ್ಲಿ ಇದ್ದು ಅವರೇ ಕಂದಾಯವನ್ನು ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ 3 ಮತ್ತು 4 ರ ದಾಖಲಾತಿಗಳು ಲಿಂಗರಾಜೇಗೌಡರ ಹೆಸರಿನಲ್ಲಿ ಇದೆ ಎಂದರೆ ಸರಿ. ಲಿಂಗರಾಜೇಗೌಡರ ಹೆಸರಿನಲ್ಲಿರುವ ಮನೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಲಿಂಗರಾಜೇಗೌಡರ ಹೆಸರಿನಲ್ಲಿ

ಬೇರೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಾವ ಲಿಂಗರಾಜೇಗೌಡರಿಗೆ 3 ಜನ ಮಕ್ಕಳು. ಅವರು ಸುರೇಶ, ಸುಷ್ಮಾ ಮತ್ತು ಸುರೇಂದ್ರ. ಸುಷ್ಮಾ ಮತ್ತು ಸುರೇಂದ್ರರವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸುಷ್ಮಾರವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಮತ್ತು ಸುರೇಂದ್ರರವರ ಮೈಸೂರಿನಲ್ಲಿ ವಾಸವಾಗಿರುತ್ತಾರೆ.

ದಾವಾ ಆಸ್ತಿ ಸಂಖ್ಯೆ 1 ಸುರೇಶ್ ರವರ ಸ್ವಯಾರ್ಜಿತ ಆಸ್ತಿಯಾಗಿದ್ದು ಅದನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ವಾದಿಯರಾದ ನಮ್ಮಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 1 ಅನ್ನು ಖರೀದಿಸುವ ಸಮಯದಲ್ಲಿ ಸುರೇಶ್ ರವರಿಗೆ ನಾವು ಮತ್ತು ಲಿಂಗರಾಜೇಗೌಡರವರು ಹಣ ನೀಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಮಗೆ ಹೀಗಾಗುತ್ತದೆ ಎಂದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಬಳಿ ಯಾವುದೇ ದಾಖಲೆಗಳು ಇರದ ಕಾರಣ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.